ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ: ಬೆಂಅಪ್ರಾ/ನಯೋಸ/CON-548/ 592 /2017-18.

ದಿನಾಂಕ:
Date: 21/09/2017

ಇವರಿಗೆ,
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,
ಬೆಂಗಳೂರು.

ಮಾನ್ಯರೇ,

ವಿಷಯ:- ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಚಿಕ್ಕಬೆಟ್ಟಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:04 ರಲ್ಲಿನ 0ಎ-12.12ಗುಂಟೆ ವಿಸ್ತೀರ್ಣದ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂ-ಪರಿವರ್ತನೆ ಮಂಜೂರಾತಿ ಅರ್ಜಿ ಸಲ್ಲಿಸಿರುವ ಬಗ್ಗೆ.

ಉಲ್ಲೇಖ:-
1. ತಮ್ಮ ಕಛೇರಿಯ ಪತ್ರದ ಸಂಖ್ಯೆ:ಎಎಲ್ಎನ್(ಎಸ್ಎವೈ)ಎಸ್ಆರ್/172/16-17 ದಿನಾಂಕ:07/09/2017. (ಸ್ವೀಕೃತಿ ದಿನಾಂಕ:11/09/2017)
2. ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ [National Green Tribual] Original application No-222/2014 ಗೆ ಸಂಬಂಧಿಸಿದಂತೆ ದಿನಾಂಕ:04/05/2016 ರಲ್ಲಿ ನೀಡಿರುವ ತೀರ್ಪು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳವರ ಅರೆ ಸರ್ಕಾರಿ ಪತ್ರದ ಕ್ರಸಂ-ನಅಇ/227/ಬೆಂಅಸೇ/2016, ದಿನಾಂಕ:17/05/2016.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಪತ್ರದೊಂದಿಗೆ ಲಗತ್ತಿಸಿರುವ ಸರ್ವೆ ಸ್ಕೆಚ್ ಆಧಾರದ ಮೇಲೆ ಪರಿಶೀಲಿಸಲಾಗಿ, ಸರ್ಕಾರದಿಂದ ದಿನಾಂಕ:25/06/2007 ರಂದು ಅನುಮೋದನೆಗೊಂಡಿರುವ RMP-2015 ರಲ್ಲಿ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಚಿಕ್ಕಬೆಟ್ಟಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:04 ರಲ್ಲಿನ 0ಎ-12.12ಗುಂಟೆ ವಿಸ್ತೀರ್ಣದ ಪ್ರದೇಶವು **Residential (Main)** ಗಾಗಿ ವರ್ಗೀಕರಿಸಿದೆ ಸಲ್ಲಿಸಿರುವ ಸರ್ವೆ ನಕ್ಷೆಯಂತೆ ಪ್ರಸ್ತಾವಿತ ಪ್ರದೇಶದಲ್ಲಿ ಕಟ್ಟಡಗಳಿರುವುದು ನಮೂದಾಗಿರುತ್ತದೆ.

ಪ್ರಸ್ತಾಪಿತ ಪ್ರದೇಶವು ಕೆರೆ ಅಥವಾ ನಾಲಾಗೆ ಲಗತ್ತಾಗಿದ್ದಲ್ಲಿ ಅಥವಾ ಪ್ರಶ್ನಿತ ಜಮೀನಿನಲ್ಲಿ ಕೆರೆ/ನಾಲಾ ಹಾದು ಹೋಗಿದ್ದಲ್ಲಿ, ಸದರಿ ಕೆರೆ/ನಾಲಾದ ಅಂಚಿನಿಂದ ಅಳವಡಿಸಬೇಕಾದ Buffer [No development Zone] ಗೆ ಕುರಿತಂತೆ ಉಲ್ಲೇಖ (2) ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯು ನೀಡಿರುವ ತೀರ್ಪಿನಂತೆ ಹಾಗೂ ಉಲ್ಲೇಖ (3) ರ ಅರೆ ಸರ್ಕಾರಿ ಪತ್ರದ ಸೂಚನೆಯಂತೆ ಕೆರೆ/ನಾಲಾಗೆ ಅಗತ್ಯವಿರುವ ಬಫರ್ ಜಾಗವನ್ನು ಹೊರತುಪಡಿಸಿ, ಉಳಿದ ಜಮೀನಿನಲ್ಲಿ ಖರಾಬ್‌ಜಾಗ ಇದ್ದಲ್ಲಿ ಸದರಿ ಖರಾಬನ್ನು ಹೊರತುಪಡಿಸಿ ಉಳಿಕೆ ಜಾಗವನ್ನು ಸಾರ್ವಜನಿಕ ರಸ್ತೆ ಸಂಪರ್ಕ ಇದ್ದಲ್ಲಿ ಮಾತ್ರ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ಬಗ್ಗೆ ಪರಿಗಣಿಸಬಹುದು. ಸದರಿ ಪ್ರದೇಶವು ಪ್ರಾಧಿಕಾರದ ಯಾವುದೇ ಯೋಜನೆಯ ಅಥವಾ ಬಡಾವಣೆಯ ಭಾಗವಾಗಿದ್ದಲ್ಲಿ ಈ ಅಭಿಪ್ರಾಯವು ಅನ್ವಯಿಸುವುದಿಲ್ಲ. ಸದರಿ ಭೂ ಪರಿವರ್ತನೆಗಾಗಿ ನೀಡಿರುವ ಅಭಿಪ್ರಾಯವು ಸದರಿ ಪ್ರದೇಶಗಳಲ್ಲಿ ಹಾಲಿ ಅನಧಿಕೃತ ಬಡಾವಣೆ/ಕಟ್ಟಡಗಳನ್ನು ಸಕ್ರಮಗೊಳಿಸಲು ನೀಡಿರುವ ಅಭಿಪ್ರಾಯವಾಗಿರುವುದಿಲ್ಲವೆಂಬ ಷರತ್ತಿಗೊಳಪಟ್ಟಿದೆ. ಈ ಪತ್ರವು ಭೂ ಉಪಯೋಗದ ಮಾಹಿತಿ ನೀಡುವ ಪತ್ರ ಮಾತ್ರವಾಗಿದ್ದು, ನಿರಾಕ್ಷೇಪಣಾ ಪತ್ರವಲ್ಲವೆಂದೂ ಹಾಗೂ ಮಾಲೀಕತ್ವದ ದಾಖಲೆಗೆ ಸಂಬಂದಿಸಿರುವುದಿಲ್ಲವೆಂದೂ ಸಹ ಈ ಮೂಲಕ ತಿಳಿಯಪಡಿಸಿದೆ ಹಾಗೂ ಸರ್ವೆ ನಂ. ಸರ್ವೆ ಸಂಖ್ಯೆ:04 ರ ಜಮೀನಿನ ಭೂಸ್ವಾಧೀನತೆಯ ಬಗ್ಗೆ ಪ್ರತ್ಯೇಕವಾಗಿ ಮಾಹಿತಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಸ್ವಾಧೀನ ವಿಭಾಗದಿಂದ ಹಾಗೂ ಇತರೆ ಭೂ ಸ್ವಾಧೀನ ಕಛೇರಿಗಳಿಂದ ಪಡೆದು ಹಾಗೂ ಸದರಿ ಜಮೀನಿಗೆ ಹಾಲಿ ಸಾರ್ವಜನಿಕ ರಸ್ತೆ ಸಂಪರ್ಕ ಇರುವ ಬಗ್ಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ದೃಢೀಕರಣ ಪತ್ರ ಪಡೆದ ನಂತರವೇ ಪ್ರಸ್ತಾವನೆಯನ್ನು ಪರಿಶೀಲಿಸುವುದು ಸೂಕ್ತವೆಂದು ಅಭಿಪ್ರಾಯ ನೀಡಲಾಗಿದೆ.

ತಮ್ಮ ವಿಶ್ವಾಸಿ,

K S Shal... 21/9

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಗರ ಯೋಜನಾ ವಿಭಾಗ,
ಬೆಂಅಪ್ರಾ, ಬೆಂಗಳೂರು.

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ-2, ನಂ.49, ಖನಿಜ ಭವನ, ಈಸ್ಟ್‌ವಿಂಗ್,
5ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560001

ಸಂಖ್ಯೆ: ಬೆಂಗಳೂರು/ವಿಭೂಸ್ವಾಅ-2/1948 /2017-18

ದಿನಾಂಕ: 14-09-2017

ವಿಶೇಷ ಭೂಸ್ವಾಧೀನಾಧಿಕಾರಿ-2

ಮಾನ್ಯ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,
ಬೆಂಗಳೂರು.

ಮಾನ್ಯರೇ,

**ವಿಷಯ:** ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಚಿಕ್ಕಬೆಟ್ಟಹಳ್ಳಿ ಗ್ರಾಮದ ಸ.ನಂ.4 ರಲ್ಲಿ 0-12.12 ಗುಂಟೆ ವಿಸ್ತೀರ್ಣದ ಜಮೀನಿನ ಭೂಸ್ವಾಧೀನದ ಮಾಹಿತಿ ಕೋರಿರುವ ಬಗ್ಗೆ.

**ಉಲ್ಲೇಖ:** ತಮ್ಮ ಕಛೇರಿ ಪತ್ರದ ಸಂಖ್ಯೆ: ಎಎಲ್‌ಎನ್(ಎನ್‌ಎವೈ)ಎಸ್‌ಆರ್/172/16-17 ದಿನಾಂಕ 07.09.2017

- - - -

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಚಿಕ್ಕಬೆಟ್ಟಹಳ್ಳಿ ಗ್ರಾಮದ ಸ.ನಂ.4 ರಲ್ಲಿ 0-12.12 ಗುಂಟೆ ವಿಸ್ತೀರ್ಣದ ಜಮೀನು ಈ ಕಛೇರಿಯ ವ್ಯಾಪ್ತಿಯಿಂದ ಭೂಸ್ವಾಧೀನವಾಗಿದೆಯೋ ಇಲ್ಲವೇ ಎಂಬುದರ ಬಗ್ಗೆ ಉಲ್ಲೇಖದನ್ವಯ ಮಾಹಿತಿ ಕೋರಿರುವುದು ಸರಿಯಷ್ಟೆ. ಕಛೇರಿಯ ಲಭ್ಯ ದಾಖಲೆಗಳ ಪರಿಶೀಲನೆಯಂತೆ ಮೇಲ್ಕಂಡ ಸರ್ವೆ ನಂಬರ್ ಜಮೀನು ಈ ಕಛೇರಿಯಿಂದ ಭೂಸ್ವಾಧೀನಪಡಿಸಲು ಅಧಿಸೂಚನೆಯನ್ನು ಹೊರಡಿಸಿರುವುದು ಕಂಡುಬರುತ್ತಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ

ಜಿಲ್ಲಾಧಿಕಾರಿಗಳ ಕಛೇರಿ
ಸ್ವೀಕರಿಸಿದೆ
14 SEP 2017
ಸಂಖ್ಯೆ..........
DEPUTY COMMISSIONER OFFICE
BANGALORE DIST. BANGALORE

ವಿಶೇಷ ಭೂಸ್ವಾಧೀನಾಧಿಕಾರಿ-2
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
ಬೆಂಗಳೂರು